## 109. ಕೃಷಿ ಭೂಮಿ ಖರೀದಿ ನಿರ್ಬಂಧ ರದ್ದು

ರಾಜ್ಯದ ರೈತರ ಹಿತ ಕಾಯುವ ನೆಪದಲ್ಲಿ ರಾಜ್ಯ ಸರ್ಕಾರ, ಭೂ ಸುಧಾರಣಾ ಕಾಯಿದೆಗೆ ತಿದ್ದುಪಡಿ ತರಲು ಮುಂದಾಗಿದೆ. ಇದರಲ್ಲಿ ಕೃಷಿಯೇತರ ಚಟುವಟಿಕೆಯಲ್ಲಿರುವವರೂ ಕೃಷಿ ಭೂಮಿ ಪಡೆಯಲು ಅವಕಾಶ ಕಲ್ಪಿಸಲು ಮುಂದಾಗಿರುವುದು ಕೃಷಿಕರಲ್ಲಿ ಆತಂಕಕ್ಕೆ ಕಾರಣವಾಗಿದೆ.

ಇಷ್ಟು ದಿನ ಕೃಷಿ ಜಮೀನು ಪಡೆಯುವುದಕ್ಕೆ ಹಲವು ಕಟ್ಟಲೆಗಳಿದ್ದವು. ಇದರೊಂದಿಗೆ ವ್ಯಾಪಾರಿಗಳು ಕೃಷಿ ಜಮೀನು ಖರೀದಿಸಲು ಅವಕಾಶ ನೀಡಿರಲಿಲ್ಲ. ಆದರೀಗ ಕೃಷಿ ಜಮೀನು ಖರೀದಿಸಲು ವಿಧಿಸಲಾಗಿದ್ದ ನಿರ್ಬಂಧಗಳನ್ನು ತೆಗೆದು ಹಾಕಿ, ಯಾರು ಬೇಕಾದರೂ ಕೃಷಿ ಜಮೀನನ್ನು ಖರೀದಿಸಿ ಕೃಷಿ ಮಾಡಲು ಅವಕಾಶ ನೀಡುವ ಹೊಸ ಕಾನೂನನ್ನು ಜಾರಿ ಮಾಡಲು ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ.

ಭೂ ಸುಧಾರಣಾ ಕಾಯಿದೆಯಲ್ಲಿ ತಿದ್ದುಪಡಿ ತರಲು ರಾಜ್ಯ ಸರ್ಕಾರ ನಿರ್ಧರಿಸಿದ್ದು, ಇದನ್ನು ಮುಂದಿನ ಅಧಿವೇಶನದಲ್ಲಿ ಮಂಡಿಸಿ, ಒಪ್ಪಿಗೆ ಪಡೆಯಲು ನಿರ್ಧರಿಸಲಾಗಿದೆ. ಆದರೆ ಈ ರೀತಿಯ ತಿದ್ದುಪಡಿಯಿಂದ ಭವಿಷ್ಯದಲ್ಲಿ ಕೃಷಿ ಚಟುವಟಿಕೆಗೆ ಹೊಡೆತ ಬೀಳುವ ಆತಂಕವನ್ನು ಕೆಲವರು ಹೊರಹಾಕಿದ್ದಾರೆ.

ಸಚಿವ ಸಂಪುಟ ಸಭೆಯ ನಂತರ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಮತ್ತು ಕಂದಾಯ ಸಚಿವ ಆರ್.ಅಶೋಕರವರು ಮಾತನಾಡಿ 'ಭೂ ಸುಧಾರಣಾ ಕಾಯಿದೆಯಲ್ಲಿ ಜಾರಿಯಲ್ಲಿದ್ದ 63ಎ, 79ಎ, ಬಿ,ಸಿ ಕಾನೂನುಗಳನ್ನು ರದ್ದು ಮಾಡಿ ಹೊಸ ಕಾನೂನು ಜಾರಿಗೊಳಿಸಲು ನಿರ್ಧರಿಸಲಾಗಿದೆ. ಈಗಾಗಲೇ ಅನೇಕ ಬಾರಿ ಭೂ ಸುಧಾರಣಾ ಕಾಯಿದೆಗಳು ಬದಲಾಗಿವೆ. ಜೊತೆಗೆ ಇವುಗಳಿಂದ ರೈತರಿಗೆ ಅನುಕೂಲಕ್ಕಿಂತ ಕಿರುಕುಳಗಳೇ ಹೆಚ್ಚಾಗಿವೆ. ನ್ಯಾಯಾಲಯಗಳಲ್ಲೂ ವ್ಯಾಜ್ಯಗಳು ಸಾಕಷ್ಟಿವೆ. ಇದಕ್ಕೆಲ್ಲ ಪರಿಹಾರವಾಗಿ ಈಗಿನ ಭೂ ಕಾಯಿದೆ ರದ್ದು ಮಾಡಿ ಹೊಸ ಕಾಯಿದೆ ರೂಪಿಸಲು ಸಚಿವ ಸಂಪುಟ ಒಪ್ಪಿಗೆ ನೀಡಲಾಗಿದೆ ಎಂದರು.

'ಮುಂದಿನ ವಿಧಾನಸಭೆಯ ಅಧಿವೇಶನದಲ್ಲಿ ಈ ಹೊಸ ಭೂ ಸುಧಾರಣಾ ಕಾಯಿದೆಯನ್ನು ಮಂಡಿಸಿ ಅನುಮೋದನೆ ಪಡೆಯಲಾಗುವುದು. ಈ ಕಾಯಿದೆ ಜಾರಿಗೆ ಸುಗ್ರೀವಾಜ್ಞೆ ಹೊರಡಿಸುವ ಆತುರದ ತೀರ್ಮಾನ ಕೈಗೊಳ್ಳಲಾಗದು. ನೂತನ ಕಾಯಿದೆಯಿಂದ ಇತರ ರಾಜ್ಯಗಳಲ್ಲಿರುವಂತೆ, ಕರ್ನಾಟಕದಲ್ಲೂ ಕೃಷಿಕರಲ್ಲದವರು ಕೃಷಿ ಜಮೀನನ್ನು ಖರೀದಿಸಿ ಕೃಷಿ ಮತ್ತಿತರ ಚಟುವಟಿಕೆಗಳನ್ನು ನಡೆಸಬಹುದಾಗಿದೆ' ಎಂದರು.

ಈ ಮೊದಲು 2 ಲಕ್ಷಕ್ಕಿಂತ ಹೆಚ್ಚು ಕೃಷಿಯೇತರ ಆದಾಯ ಇರುವವರು ಕೃಷಿ ಜಮೀನನ್ನು ಖರೀದಿಸುವಂತಿರಲಿಲ್ಲ. ನಂತರ ಆದಾಯದ ಮಿತಿಯನ್ನು 25 ಲಕ್ಷಕ್ಕೆ ಏರಿಸಲಾಗಿತ್ತು. ಈಗ ಇದನ್ನೆಲ್ಲ ರದ್ದು ಮಾಡಿ ಕೃಷಿ ಜಮೀನು ಖರೀದಿಸಲು ಅವಕಾಶ ಮಾಡಿಕೊಡುವ ಕಾನೂನು ಜಾರಿ ಮಾಡಲಾಗುವುದು. ಇದರಿಂದ ರೈತರು ಸಹ ತಮ್ಮ ಜಮೀನಿಗೆ ಒಳ್ಳೆಯ ಬೆಲೆ ಪಡೆಯಲಿದ್ದಾರೆ. ಈ ಸಂಬಂಧ ಸುಳ್ಳು ದಾಖಲೆಗಳು, ಪ್ರಮಾಣ ಪತ್ರ ನೀಡಿ ಕೃಷಿ ಜಮೀನು ಖರೀದಿಸುವ ವ್ಯವಹಾರಗಳು ನಿಲ್ಲಲಿವೆ' ಎಂದರು

**ಸಚಿವ ಸಂಪುಟದ ಪ್ರಮುಖ ಅಂಶಗಳು:–**

- ➢ ರೈತ ಚಳುವಳಿ, ಕನ್ನಡ ಚಳುವಳಿ ಹಾಗೂ ಗಣಪತಿ ವಿಸರ್ಜನೆಯಂತಹ ಗಲಾಟೆಯಂತಹ 53 ಪ್ರಕರಣಗಳು ವಾಪಸ್ಸು.
- ➢ 47 ತಾಲ್ಲೂಕುಗಳ 1,307 ಆರೋಗ್ಯ ಉಪ ಕೇಂದ್ರಗಳನ್ನು, ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲು ನಿರ್ಧಾರ.
- ➢ ಬೆಂಗಳೂರು ಕೇಂದ್ರ ವಿಶ್ವವಿದ್ಯಾನಿಲಯಕ್ಕೆ, ಬೆಂಗಳೂರು ನಗರ ವಿಶ್ವ ವಿದ್ಯಾನಿಲಯ ಎಂದು ಹೆಸರಿಡಲು ಒಪ್ಪಿಗೆ.
- ➢ ಬೆಂಗಳೂರಿನ ಸರ್ಕಾರಿ ವಿಜ್ಞಾನ ಕಾಲೇಜಿಗೆ, ಕ್ಲಸ್ಟರ್ ವಿವಿ ಸ್ಥಾನಮಾನ ನೀಡಿ ಮೇಲ್ದರ್ಜೆಗೇರಿಸಲು ಸಂಪುಟ ಒಪ್ಪಿಗೆ.
- ➢ ಹಾಸನ ಹಾಗೂ ಸಿಂಧಗಿಯಲ್ಲಿ ತೋಟಗಾರಿಕಾ ಕಾಲೇಜಿನ ಸ್ಥಾಪನೆ ಸದ್ಯಕ್ಕೆ ಬೇಡವೆಂದು ನಿರ್ಧಾರ.

- ಸಹಕಾರಿ ಸಕ್ಕರೆ ಕಾರ್ಖಾನೆಗಳ ಚುನಾವಣೆಗಳನ್ನು ಹೊರತುಪಡಿಸಿ, ಉಳಿದ ಸಹಕಾರಿ ಸಂಘಗಳ ಚುನಾವಣೆ ನಡೆಸಲು ಒಪ್ಪಿಗೆ.
- ಕರ್ನಾಟಕದ ಉಪ ಖನಿಜ ನಿಯಮಾವಳಿ ಬದಲಿಸಲಾಗಿದೆ.
- ಇಂದಿರಾ ಕ್ಯಾಂಟೀನ್ ದರ ಹೆಚ್ಚಿಸುವ ಬಗ್ಗೆ ಮುಂದಿನ ಸಂಪುಟ ಸಭೆಯಲ್ಲಿ ತೀರ್ಮಾನ.

ಆಧಾರ:ವಿಜಯವಾಣಿ, ದಿನಾಂಕ:12.06.2020